ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **76/2025**

| | | |
|---|---|---|
| ಸಾಕ್ಷಿಯ ಹೆಸರುಃ | ಸಾಬರೆಡ್ಡಿ | ಪ್ರಾಸಾಃ4 |
| ತಂದೆ/ಗಂಡನ ಹೆಸರುಃ | ಹಳ್ಳೆಪ್ಪ | ಚಾಸಾಃ 6 |
| ವಯಸ್ಸು ಃ | 33 ವರ್ಷ | ದಿಃ 18-12-2025 |
| ಉದ್ಯೋಗಃ | ಪೊಲಿಸ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಕೊರಟಗೇರಾ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು 2023 ರಿಂದ ಇಲ್ಲಿಯವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಪೊಲಿಸ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ದಿನಾಂಕ 08-08-2023 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾಃ 1 ರವರು ನನ್ನನ್ನು ಕರೆದುಕೊಂಡು ಹಳ್ಳಿಗಳಿಗೆ ಹೊರಟು ಸಾಮಾಜಿಕ ಜಾಲತಾಣ ಮತ್ತು ಗುಪ್ತ ಮಾಹಿತಿ ಸಂಗ್ರಹಿಸಲು ರಾಮಸಮುದ್ರ ಗ್ರಾಮಕ್ಕೆ ಹೋಗಿ ನಂತರ ಮದ್ಯಾಹ್ನ 1.00 ಗಂಟೆಗೆ ಆಶನಾಳ ಗ್ರಾಮಕ್ಕೆ ಹೋಗಿ ಸಾಮಾಜಿಕ ಜಾಲತಾಣದ ಬಗ್ಗೆ ಮಾಹಿತಿ ನೀಡುವಾಗ ಇನಸ್ಟಾಗ್ರಾಮದಲ್ಲಿ ಚಾಸಾಃ 1 ರವರ ಮೊಬೈಲನಲ್ಲಿ ಒಂದು ವಿಡಿಯೋ ಬಂದಿರುತ್ತದೆ ಅದರಲ್ಲಿ ಮೊಹರಂ ಹಬ್ಬದಲ್ಲಿ ಹಾಡು ಹಾಡಿ ಕುಣಿದು ಕುಪ್ಪಳಿಸುವ ಜನರೇ ನೆನಪು ಇಡಿ ನಾಳೆ ನಿಮ್ಮ ತಂದೆ-ತಾಯಿ ಸತ್ತರೆ ಮರೆಯಬೇಡಿ ನಾವು ನಾಳೆ ಬಂದು ಡೊಳ್ಳು ತಾಶೆ ಬಡಿದು ಕುಣಿದು ಕುಪ್ಪಳಿಸುತ್ತೇವೆ ಅಂತ ಮೊಹರಂ ಹಬ್ಬದ ಬಗ್ಗೆ ಅವಮಾನ ವಿಡಿಯೋ ಮಾಡಿ ಬಂದಿದ್ದು, ಅದರ ಇನಸ್ಟಾಗ್ರಾಮ ಐಡಿ ನೋಡಿದಾಗ Syeds Jagirdar V-18 ಇತ್ತು. ಸದರಿ ಆರೋಪಿತನ ಬಗ್ಗೆ ವಿಚಾರಿಸಿದಾಗ ಅಕ್ಬರ ಅಲಿ ತಂದೆ ಸೈಯದ ಬಹದ್ದೂರ ಅಲಿ ಮತ್ತು ಮೊಹ್ಮದ ಅಯಾಜ ತಂದೆ ಅಬ್ದುಲ ರೆಹಮಾನ ಎಂದು ತಿಳಿದು ಬಂದಿರುತ್ತದೆ. ಸದರಿ ವಿಡಿಯೋದಿಂದ ಮುಸ್ಲಿಂ ಸುಮುದಾಯಕ್ಕೆ ಅಪಮಾನ ಮಾಡಿ, ವೈಶಮ್ಯ ಉಂಟು ಮಾಡಲು ಪ್ರಯತ್ನಿಸಿರುತ್ತಾರೆ. ನಾನು ಪೊಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಮು. ಮಾ. 1 ನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಸಿ. ಕೆ. ಎಚ್. ವಕೀಲರಿಂದ.</u>

1. ಮೊಹರಂ ಹಬ್ಬ ಹಿಂದು-ಮುಸ್ಲಿಂ ಸೇರಿ ಆಚರಿಸುತ್ತಾರೆ ಎಂದರೆ ಸರಿ. ಸದರಿ ಮೊಹರಂ ಹಬ್ಬದಲ್ಲಿ ಹಿಂದು ಜನರು ಮಾದ್ಲಿ ಮಾಡಿ ಉಪವಾಸ ಮಾಡುತ್ತಾರೆ ಎಂದರೆ ಸರಿ. ಸದರಿ ಸಾಮಾಜಿಕ ಜಾಲತಾಣದಲ್ಲಿ ಯಾವ ಖಾತೆಯಿಂದ ವಿಡಿಯೋ ಬಂದಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಡಿಯೋದಲ್ಲಿ ಮುಸ್ಲಿಂ ಸಮುದಾಯಕ್ಕೆ ಅವಮಾನ ಮಾಡುವ ಹಾಡು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಾಮಾಜಿಕ ಜಾಲತಾಣದ ಬಗ್ಗ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಒಂದು ವಿಡಿಯೋ ಅಪಲೋಡ ಆದಾರ ಮೂಲ ಖಾತೆಯನ್ನು ಹುಡಕಲು ಸಾದ್ಯವಾಗುವುದಿಲ್ಲ ಎಂದರೆ ಸರಿಯಲ್ಲ.

2. ಸದರಿ ನಾನು ಕರ್ತವ್ಯಕ್ಕೆ ಹೋಗುವಾಗ ರಿಜಿಸ್ಟರನಲ್ಲಿ ಸಹಿ ಮಾಡಿ ಹೋಗಿರುತ್ತೀರಾ? ಎಂದರೆ ಸಾಕ್ಷಿಯು ಮೌಖಿಕ ಆದೇಶದ ಮೇಲೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಇನಸ್ಟ್ರಾಗ್ರಾಮದಲ್ಲಿ ವಿಡಿಯೋ ನೋಡಲು ಒಬ್ಬರು ಇನ್ನೊಬ್ಬರಿಗೆ ಫ್ರೆಂಡ್ ಇರಬೇಕು ಎಂದರೆ ಸರಿಯಲ್ಲ. ಠಾಣೆಯಿಂದ 11.30 ರಿಂದ 12.00 ಗಂಟೆಯವರೆಗೆ ಬಿಟ್ಟಿರುತ್ತೇವೆ. ಸದರಿ ರಾಮಸಮುದ್ರ ಠಾಣೆಯಿಂದ ಸುಮಾರು 4 ಕಿ.ಮೀ ಅಂತರದಲ್ಲಿದೆ. ಠಾಣೆಯಿಂದ ರಾಮಸಮುದ್ರಕ್ಕೆ ಹೋಗಲು 1.00 ಗಂಟೆಯ ಕಾಲಾವಕಾಶ ಬೇಕು ಎಂದರೆ ಸರಿಯಲ್ಲ. ರಾಮಸಮುದ್ರದಲ್ಲಿ ಅರ್ಧ ಘಂಟೆ ಮಾಹಿತಿ ಪಡೆದುಕೊಂಡಿರುತ್ತೇವೆ. ಠಾಣೆಯ ಸಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರು ಹಾಜರಾತಿ ಪುಸ್ತಕದಲ್ಲಿ ಬರೆದಿರುತ್ತಾರೆ. ಸದರಿ ಆರೋಪಿತರ ಸಾಮಾಜಿಕ ಜಾಲತಾಣದ ಖಾತೆಯ ಬಗ್ಗ ನನಗೆ ಮುಂಚೆ ಮಾಹಿತಿ ಇರಲಿಲ್ಲ. ಸದರಿ ವಿಡಿಯೋದಲ್ಲಿ ಆರೋಪಿತರು ಧ್ವನಿ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ದೂರಿನಲ್ಲಿ ಸಾಮಾಜಿಕ ಜಾಲತಾಣದ ಖಾತೆಯನ್ನು ನಮೂದಿಸಿರುತ್ತೇವೆ. ಸದರಿ ಹಾಜರಾತಿ ಪುಸ್ತಕವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ದಿನಾಂಕಃ 08-08-2023 ರಂದು ಆಶನಾಳ ಗ್ರಾಮಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಐ.ಡಿ ಮೂಲಕ ವಿಡಿಯೋ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರು ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. ಈ ಘಟನೆಗೆ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿನ ಪೊಟೋ ಪ್ರಕರಣಕ್ಕೆ ಅನುಕೂವಾಗುತ್ತದೆ ಎಂದು ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೊಬೈಲ ಜಪ್ತಿ ಮಾಡಿದಾಗ ವಿಡಿಯೋ ಇತ್ತು. ಸದರಿ ಆರೋಪಿತರು ಮುಸ್ಲಿಂ ಸಮುದಾಯಕ್ಕೆ ಅಪಮಾನ ಆಗುವ ರೀತಿಯಲ್ಲಿ ವಿಡಿಯೋ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಡಿಯೋ ಯಾವ ದಿನಾಂಕದಂದು ಅಪಲೋಡ ಆಗಿರುತ್ತದೆ ಎಂದು ಗೊತ್ತಿಲ್ಲ. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಈ ಮುಂಚೆ ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ